ಶ್ರೀ ಪಿ. ಎಂ. ಚಿಕ್ಕಬೋರಯ್ಯ.—ಮಾನ್ಯ ಅಧ್ಯಕ್ಷರೆ, ನನ್ನ ಮೊದಲನೇ ಪ್ರಶ್ನೆಯಲ್ಲಿ ದಿನಾಂಕ ೧-೧-೧೯೮೮ರ ಬಳಿಕ ಅನುಷ್ಠಾನಕ್ಕೆ ತಂದಿರುವ ನಗರಾಭಿವೃದ್ಧಿ ಸಮಿತಿಯ ನಿರ್ಣಯಗಳು ಅನುದಾನ ಗಳಿಗೆ ತಡೆಹಿಡಿಯಲು ರಾಜ್ಯ ಸರ್ಕಾರ ಆದೇಶವನ್ನು ನೀಡಿದೆಯೇ ಎಂದು ಕೇಳಿದ್ದಕ್ಕೆ 'ಹೌದು' ಎಂದು ಹೇಳಿದ್ದಾರೆ, ಆದರೆ ಅನುದಾನಗಳಿಗೆ ಸಂಬಂಧಿಸಿದಂತೆ ಯಾವ ತಡೆಯನ್ನೂ ನೀಡಿಲ್ಲ ಎಂದು ಉತ್ತರದ ಕೊನೆಯಭಾಗದಲ್ಲಿ ಹೇಳಿದ್ದಾರೆ. ಈ ಎರಡಕ್ಕೂ ಸಮಂಜಸವಾಗುವುದಿಲ್ಲ. ಆದ್ದರಿಂದ ದಯವಿಟ್ಟು ಇದಕ್ಕೆ ಕ್ಲಾರಿಫಿಕೇಷನ್ ಕೊಡಬೇಕು ಎಂದು ಕೋರುತ್ತೇನೆ. ಎರಡನೆಯದು, ದಿನಾಂಕ ೧-೧-೧೯೮೮ ರಿಂದ ನಗರಾಭಿವೃದ್ಧಿ ಪ್ರಾಧಿಕಾರಗಳ ಕಾನೂನು ಜಾರಿಗೆ ಬಂತು, ಅಲ್ಲಿಂದೀಚೆಗೆ ನಗರಾಭಿವೃದ್ಧಿ ಮಂಡಲಿಯವರು ಮಾಡಿರತಕ್ಕಂಥ ಕೆಲಸಗಳ ಬಗ್ಗೆ ತಡೆ ಹಿಡಿಯಲಾಗಿದೆ ಎಂದು ಹೇಳಿದ್ದಾರೆ. ಅದನ್ನು ಜಾರಿಗೆ ತರಲಾಗಿದೆ ಎಂದು ಹೇಳಿದ್ದಾರೆ. ಇದು ೧-೧-೧೯೮೮ರಲ್ಲಿ ನಗರಾಭಿವೃದ್ಧಿ ಪ್ರಾಧಿಕಾರಗಳು ಜಾರಿಗೆ ಬಂದಮೇಲೆ ನಗರಾಭಿವೃದ್ಧಿ ಮಂಡಲಿಯವರು ಹೇಗೆ ಇರಲಿಕ್ಕೆ ಸಾಧ್ಯ ಎನ್ನುವುದು ಎರಡನೇ ಪ್ರಶ್ನೆ. ಮೂರನೆಯದು, ಈ ರೀತಿ ೧-೧-೧೯೮೮ ರಂದು ಸರ್ಕಾರದವರು ತಡೆಯಾಜ್ಞೆ ಕೊಟ್ಟಿದ್ದಾರೆ. ಇದೇರೀತಿಯಾಗಿ ಅನೇಕ ನಿಗಮಗಳ ಅಧ್ಯಕ್ಷರುಗಳು ರಾಜೀನಾಮೆ ಕೊಟ್ಟು ಅವು ಅಂಗೀಕಾರ ವಾಗಿದೆ. ಅವುಗಳ ಬಗ್ಗೆ ಏನಾದರೂ ಈರೀತಿ ಕಾರ್ಯಕ್ರಮ ಅಂದರೆ ತಡೆಹಿಡಿಯುವ ಕಾರ್ಯಕ್ರಮ ತೆಗೆದುಕೊಡಿದ್ದೀರಾ ಎನ್ನುವುದಕ್ಕೆ ದಯವಿಟ್ಟು ಮಾನ್ಯ ಮಂತ್ರಿಗಳು ಉತ್ತರ ಹೇಳಬೇಕು ಎಂದು ನಾನು ಕೋರುತ್ತೇನೆ.

ಶ್ರೀ ಎಂ. ಚಂದ್ರಶೇಖರ್.—ಮೊದಲನೆಯದಾಗಿ ಹೌದು ಎಂದು ಉತ್ತರ ಕೊಟ್ಟಿದೆ. ತಡೆ ನೀಡ ಲಾಗಿದೆಯೇ ಎಂದು ಕೇಳಿದ್ದಕ್ಕೆ ಹೌದು ಎಂದು ಉತ್ತರ ಕೊಟ್ಟಿದೆ. ೧-೧-೧೯೮೮ರ ದಿನದಿಂದ ಅದರಲ್ಲಿ ವಿವರವಾಗಿ ಕೊಟ್ಟಹಾಗೆ ಕಾರ್ಯಕ್ರಮಗಳ ಬಗ್ಗೆ ತಡೆ ನೀಡಿದೆ, ಆದರೆ ಅನುದಾನಗಳ ಬಗ್ಗೆ ಪ್ರತ್ಯೇಕವಾಗಿ ಕೇಳಿದ್ದಾರೆ. ಅನುದಾನಗಳಿಗೆ ತಡೆನೀಡಿಲ್ಲ ಠರಾವುಗಳಲ್ಲಿ ಲೋಪದೋಷಗಳು ಏನಾದರೂ ಇದ್ದು ಅವರು ತೀರ್ಮಾನ ತೆಗೆದುಕೊಂಡಿದ್ದರೆ ಅದು ಸಮಂಜಸವಾಗಿ ಕಾಣುವುದಿಲ್ಲ. ಅದು ಕಾನೂನಿಗೆ ವಿರುದ್ಧ ವಾಗಿ ಏನಾದರೂ ಆಗಬಹುದು ಎನ್ನುವಂಥ ಅಭಿಪ್ರಾಯದಿಂದ ತಡೆನೀಡದೆ. ಅದನ್ನು ಈಗ ಪ್ರತ್ಯೇಕ ವಾಗಿ ವಿಚಾರ ಮಾಡಿಕೊಳ್ಳುತ್ತೇವೆ. ಯಾವುದೇ ಕಾನೂನು ಬಾಹಿರವಾದಂಥ ತೀರ್ಮಾನ ತೆಗೆದು ಕೊಂಡಿಲ್ಲ. ಹಾಗೆ ಏನಾದರೂ ಇತ್ತು ಅಂದರೆ ಅದನ್ನು ಪರಿಶೀಲನೆಮಾಡಿ ಸರ್ಕಾರ ಕ್ರಮ ತೆಗೆದು ಕೊಳ್ಳುತ್ತದೆ. ಎರಡನೆಯದಾಗಿ, ಅವರು ಇದೇರೀತಿಯಾಗಿ ಬೇರೆ ಪ್ರಾಧಿಕಾರಿಗಳ ಮೇಲೆ ಕ್ರಮ ತೆಗೆದು ಕೊಂಡಿದ್ದೀರಾ ಎಂದು ಕೇಳಿದ್ದಾರೆ. ಇದು ಏನಿದ್ದರೂ ನಗರಾಭಿವೃದ್ಧಿ ಪ್ರಾಧಿಕಾರಗಳು, ನಗರಪಾಲಿನ ಪ್ರದೇಶಗಳಲ್ಲಿ ಇರುವಂಥ ಸಂಸ್ಥೆಗಳನ್ನು ಮಾತ್ರ ತೆಗೆದುಕೊಂಡಿದೆ, ಮಿಕ್ಕ ಯಾವುದರ ಮೇಲೂ ತೆಗೆದುಕೊಂಡಿಲ್ಲ.

ಶ್ರೀ ಪಿ. ಎಂ. ಚಿಕ್ಕಬೋರಯ್ಯ.—೧-೧-೮೮ ರಿಂದೀಚೆಗೆ ಅನೇಕ ಠರಾವುಗಳನ್ನು ಮಂಡಳಿಗಳ ವರು ಮಾಡಿದ್ದಾರೆ. ಆ ಠರಾವುಗಳಲ್ಲಿ ಆರ್ಥಿಕವಾಗಿ ದುರ್ಬಲವರ್ಗದವರಿಗೆ ನಿವೇಶನ ಕೊಡಲಿಕ್ಕೆ ಮತ್ತು ಮನೆ ಕಟ್ಟಲಿಕ್ಕೆ ಠರಾವು ಮಾಡಿದ್ದಾರೆ. ಅವುಗಳನ್ನೂ ಕೂಡ ತಡೆಹಿಡಿದ್ದಾರೆಯೇ ಎಂಬುದರ ಬಗ್ಗೆ ಉತ್ತರ ಹೇಳಿ.

ಶ್ರೀ ಎಂ. ಚಂದ್ರಶೇಖರ್.—ಜಿಲ್ಲಾಧಿಕಾರಿಗಳಿಗೆ ತಿಳಿಸಿದ್ದೇನೆ- ಪ್ರಾಧಿಕಾರದ ಅಧ್ಯಕ್ಷರೂ ಕೂಡ ಈಗ ನೇಮಕವಾಗಿದ್ದಾರೆ. ಅವರಿಂದ ವರದಿಯನ್ನು ಪಡೆದು ನಿಯಮದ ಪ್ರಕಾರವಾಗಿ ಯಾವ ರೀತಿ ಕಾರ್ಯಕ್ರಮಗಳನ್ನು ತೆಗೆದುಕೊಳ್ಳಬೇಕೋ ಆ ರೀತಿ ತೆಗೆದುಕೊಳ್ಳುತ್ತೇವೆ. ಅದನ್ನು ತಡೆಹಿಡಿಯುವುದಿಲ್ಲ. ಆದರೆ ಮಿಕ್ಕ ವಿಚಾರದಲ್ಲಿ ಏನಾದರೂ ಕಾನೂನು ಬಾಹಿರವಾಗಿ ತೀರ್ಮಾನಗಳು ಆಗಿದ್ದರೆ ಅವುಗಳ ಬಗ್ಗೆ ಸರ್ಕಾರ ತೀರ್ಮಾನ ತೆಗೆದುಕೊಳ್ಳುತ್ತದೆ.

ಕೊಡಗಿನಲ್ಲಿ ಕ್ರೀಡಾಂಗಣದ ನಿರ್ಮಾಣ

೧೯೭೨. ಶ್ರೀ ಡಿ.ಎ. ಚಿನ್ನಪ್ಪ (ಮಡಿಕೇರಿ).—ಮಾನ್ಯ ಯುವಜನ ಸೇವಾ ಹಾಗೂ ಕ್ರೀಡಾ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಕೊಡಗಿನಲ್ಲಿ ಕ್ರೀಡಾಂಗಣ ಪೂರ್ಣ ಗೊಂಡಿದಿಯೇ ?

ಅ) ಪೂರ್ಣವಾಗದಿದ್ದರೆ ಇದಕ್ಕೆ ಕಾರಣ ಕೊಡುವುದು,

ಇ) ಈ ವಿಷಯದ ಬಗ್ಗೆ ಜಿಲ್ಲಾಧಿಕಾರಿಗಳು ಕ್ರೀಡಾಂಗಣ ಪೂರ್ಣಗೊಳ್ಳಲು ಸರ್ಕಾರದಿಂದ ಹಣ ಬಿಡುಗಡೆ ಮಾಡಲು ಪತ್ರ ಬರೆದಿರುವುದು ನಿಜವೇ ?

ಈ) ಕ್ರೀಡಾಂಗಣ ಸಮಿತಿಯವರು ಲೆಕ್ಕದ ವಿವರವನ್ನು ಇಡದೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಆರ್.ಸಿ. ಜಿಗಜಿಣಗಿ (ಗಣಿ ಮಂತ್ರಿ, ಭೂವಿಜ್ಞಾನ ಹಾಗೂ ಯುವಜನ ಸೇವಾ ಮಂತ್ರಿ, ಕ್ರೀಡಾ ಸಚಿವರು).—

ಅ) ಇಲ್ಲ.

ಆ) ಸಾರ್ವಜನಿಕ ಮಂತಿಕೆ ಕೇಂದ್ರ ಸರ್ಕಾರದ ಧನಸಹಾಯದ ಮೇಲೆ ಅವಲಂಬಿಸಿದೆ.

ಇ) ಇಲ್ಲ.

ಈ) ಇಲ್ಲ,

ಶ್ರೀ ಡಿ.ಎ. ಚಿನ್ನಪ್ಪ.— ನನ್ನ ಮೊದಲನೆಯ ಪ್ರಶ್ನೆಗೆ ಉತ್ತರ ಕೊಟ್ಟಿಲ್ಲ. ಸರ್ಕಾರದವರಿಗೆ ಜಿಲ್ಲಾಧಿಕಾರಿಗಳು ಕಾಗದ ಬರೆದಿರತಕ್ಕದ್ದು ಸರ್ಕಾರದ ಗಮನಕ್ಕೆ ಬಂದಿಲ್ಲವೆಂದು ಹೇಳಿದ್ದಾರೆ. ಜಿಲ್ಲಾಧಿಕಾರಿಗಳಿಂ ಸುಳ್ಳು ಹೇಳುತ್ತಾರೋ ಅಥವಾ ಸರ್ಕಾರ ಹೇಳುವುದು ಸರಿಯೋ ನನಗೆ ಅರ್ಥ ವಾಗುತ್ತಿಲ್ಲ. ನಾನು ಜಿಲ್ಲಾಧಿಕಾರಿಗಳನ್ನು ಪರ್‌ಸನಲ್ ಆಗಿ ಕೇಳಿದಾಗ ಅವರು ಹೇಳಿದ್ದಾರೆ. ನಾನು ಬೇಕಾದಷ್ಟು ಕಾಗದವನ್ನು ಬರೆದಿದ್ದೇನೆಂದು. ಇದರಲ್ಲಿ ಕೇಂದ್ರ ಸರ್ಕಾರದಿಂದ ಮಂತ್ರಿ ಸಾರ್ವ ಜನಿಕರಿಂದ ಹಣಬಂದಿಲ್ಲವೆಂದು ಹೇಳಿದ್ದಾರೆ, ರಾಜ್ಯ ಸರ್ಕಾರದಿಂದ ಎಷ್ಟು ಹಣ ಒದಗಿಸಲಾಗಿದೆ ಎಂಬುದನ್ನು ಹೇಳಬೇಕು. ಶ್ರೀ ಬೋರ್‌ಕರ್ ಅವರು ಎಸ್.ಪಿ. ಆಗಿದ್ದ ಕಾಲದಲ್ಲಿ ಎಷ್ಟು ಹಣ ಸಾರ್ವಜನಿಕರಿಂದ ವಸೂಲಿ ಆಗಿದೆ ? ಶ್ರೀ ಗುರುಪ್ರಸಾದ್‌ರವರು ಎಸ್.ಪಿ ಆಗಿದ್ದಾಗ ಆಲ್ ಇಂಡಿಯಾ ಹಾಕಿ ಟೂರ್ನಮೆಂಟ್ ಮಾಡಿದರು ಅದರಲ್ಲಿ ಎಷ್ಟು ಹಣ ಬಂತು. ಬೋರ್‌ಕರ್ ಅವರು ಇದ್ದಾಗ ಜೇಸುದಾಸ್ ನೈಟ್ ಮಾಡಿದರು ಆಗ ಎಷ್ಟು ಹಣ ವಸೂಲಿಯಾಯಿತು ? ಶ್ರೀ ನಾರಾಯಣ ರಾಯರು ಕ್ರಿಕೆಟ್ ಪಂಡರ್ ಟೂರ್ನಮೆಂಟ್ ಮಾಡಿದಾಗ ಎಷ್ಟು ಹಣ ವಸೂಲಿಯಾಯಿತು ? ನನಗೆ ಗೊತ್ತಿರುವ ಹಾಗೆ ಸುಮಾರು ೨೫–೨೬ ಲಕ್ಷ ರೂ. ವಸೂಲಿಯಾಗಿದೆ. ಕಾಂಗ್ರೆಸ್ ಹೋದ ಕೂಡಲೇ ಈ ಕೆಲಸ ಸ್ಥಗಿತಗೊಂಡಿದೆ. ಆಗ ಜಿಲ್ಲಾಧಿಕಾರಿಯಾಗಿದ್ದು, ಶ್ರೀಮತಿ ವೀಣಾ ಶ್ರೀ ರಾಮರಾವ್ ರವರು ಬಹಳ ಬಿರುಸಿನಿಂದ ಈ ಕೆಲಸಗಳನ್ನು ನಡೆಸಿದರು. ನಂತರ ಅದು ಏನಾಯಿತೋ ಗೊತ್ತಿಲ್ಲ. ಈಗ ಪರಿಸ್ಥಿತಿ ಏನಾಗಿದೆಯೆಂದರೆ ಅಲ್ಲಿ ಒಂದು ಆಫೀಸರ್ಸ್ ಕ್ಲಬ್ ಮಾಡಿದ್ದಾರೆ. ಇದರ ಬಗ್ಗೆ ಏನು ಕ್ರಮ ತೆಗೆದುಕೊಂಡಿದ್ದೀರಿ ? ಎಷ್ಟು ಹಣ ವಸೂಲಿಯಾಗಿದೆ ಎಷ್ಟು ಹಣ ಖರ್ಚಾಗಿದೆ ಎಂಬುದನ್ನು ತಿಳಿಸಬೇಕು. ಕೇಂದ್ರ ಸರ್ಕಾರದಿಂದ ಹಣ ಬರಬೇಕಾದರೆ ರಾಜ್ಯ ಸರ್ಕಾರದವರು ಕಾಗದ ಬರೆಯ ಬೇಕು. ನೀವೇನಾದರೂ ಕಾಗದ ಬರೆದಿದ್ದೀರಾ ?

ಶ್ರೀ ರಮೇಶ್ ಜಿಗಜಿಣಗಿ.—ಎಲ್ಲಾ ಜಿಲ್ಲೆಗಳಲ್ಲೂ ಕ್ರೀಡಾಂಗಣ ಕಟ್ಟುವ ಕಾರ್ಯ ನಡೆದಿದೆ. ೧೯ ಜಿಲ್ಲೆಗಳಲ್ಲೂ ಈ ಕಾರ್ಯಕ್ರಮ ಕೈಗೆ ತೆಗೆದುಕೊಂಡಿದ್ದೇವೆ. ಕೊಡಗು ಜಿಲ್ಲೆಯ ಕ್ರೀಡಾಂಗಣಕ್ಕೆ ಮೂಲ ಎಸ್ಟಿಮೇಟ್ ೧೫ ಲಕ್ಷ ಆಗಿದ್ದು ಇವತ್ತು ಅದರ ಮೂಲ ಎಸ್ಟಿಮೇಟನ್ನು ೨೯ ಎಸ್ಟಿಮೇಟ್ ಮಾಡಿದಾಗ ೨೫ ಲಕ್ಷ ಆಗಿದೆ- ಇದುವರೆಗೆ ಕೇಂದ್ರದ್ದು ಮತ್ತು ರಾಜ್ಯ ಸರ್ಕಾರದ್ದು ಸೇರಿ ೧೪.೭೦ ಲಕ್ಷ ರೂಪಾಯಿಗಳಷ್ಟು ಖರ್ಚು ಮಾಡಿದ್ದೇವೆ, ಇನ್ನು ಕೇಂದ್ರದಿಂದ ೧೧ ಲಕ್ಷ ಬರಬೇಕಾಗಿದೆ. ಅದರ ಸಲುವಾಗಿ ಪುನಃ ಕೇಂದ್ರ ಸರ್ಕಾರಕ್ಕೆ ಒತ್ತಾಯಮಾಡಿ ಕಾಗದ ಬರೆಯುತ್ತೇನೆ. ಸಾರ್ವಜನಿಕರಿಂದ ೧೩ ಲಕ್ಷ ರೂಪಾಯಿ ಪಂತಿಕೆ ಹಣ ಬರಬೇಕಾಗಿದೆ. ಅದು ಇನ್ನೂ ಬಂದಿಲ್ಲ, ಆದ್ದರಿಂದ ಈ ಕಾರ್ಯ ಸ್ಥಗಿತಗೊಂಡಿದೆ. ಸಾಧ್ಯವಾದ ಮಂಟ್ಟಿಗೆ ಅದನ್ನು ಬೇಗ ಮಾಡಲು ನಾನು ಪ್ರಯತ್ನ ಮಾಡುತ್ತೇನೆ.

ಶ್ರೀ ಡಿ.ಎ. ಚಿನ್ನಪ್ಪ.—ಸಾರ್ವಜನಿಕರಿಂದ ಹಣ ವಸೂಲು ಮಾಡುವ ಪ್ರಯತ್ನವನ್ನು ೫ ವರ್ಷ ಗಳಿಂದ ಮಾಡಿಲ್ಲ. ಇದಕ್ಕೆ ಅಧ್ಯಕ್ಷರು, ಜಿಲ್ಲಾಧಿಕಾರಿಗಳು, ಸೆಕ್ರೆಟರಿಗಳು ಎಸ್.ಪಿ. ಯವರು ಅವರು ಮಾಡಬೇಕಾಗಿದೆ.

ಶ್ರೀ ರವೀಶ್ ಸಿ. ಜಿಗಜಿಣಗಿ.—ಸಾರ್ವಜನಿಕರಿಂದ ವಂತಿಕೆಯನ್ನು ಕೇಳಲು ನಮ್ಮ ಅಧಿಕಾರಿಗಳು ಪ್ರಯತ್ನ ಮಾಡಿಲ್ಲವೆಂದು ಹೇಳಿದ್ದಾರೆ. ಪುನಃ ನಾಳೆ ನಾನು ಅಧಿಕಾರಿಗಳಿಗೆ ಹೇಳಿ ಪತ್ರ ಬರೆಯುತ್ತೇನೆ.

ರಾಜ್ಯದಲ್ಲಿ ಪ್ರತಿಮೆಗಳ ಅನಾವರಣ ಮಾಡುವಾಗ ಅನುಸರಿಸಬೇಕಾದ ನಿಯಮಗಳು

೨೦೮೯. ಶ್ರೀ ಬಿ. ಲಕ್ಕಪ್ಪ, (ಚಿಕ್ಕನಾಯಕನಹಳ್ಳಿ).—ಮಾನ್ಯ ನಗರಾಭಿವೃದ್ಧಿಹಾಗೂ ಲೋಕೋಪಯೋಗಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಜ್ಯದಲ್ಲಿ ಪ್ರತಿಮೆಗಳನ್ನು ಅನಾವರಣ ಮಾಡುವ ಸಂದರ್ಭದಲ್ಲಿ ಅನುಸರಿಸುತ್ತಿರುವ ನಿಯಮಗಳಾವುವು ?

ಆ) ಇತ್ತೀಚೆಗೆ ಬೆಂಗಳೂರು ನಗರಪಾಲಿಕೆಯವರು, ಬೆಂಗಳೂರು ನಗರದಲ್ಲಿ ಕಾಮರಾಜ್ ನಾಡಾರ್‌ರವರ ಪ್ರತಿಮೆಯನ್ನು ಅನಾವರಣಗೊಳಿಸಲು ಉದ್ದೇಶಿಸಿರುವುದು ಸರ್ಕಾರದವರಿಗೆ ತಿಳಿದಿದೆಯೇ ?

ಇ) ಸದರಿ ಪ್ರತಿಮೆಯ ಅನಾವರಣದ ವಿಷಯದ್ದಾ ಸಾರ್ವಜನಿಕರಿಂದ ಹಾಗೂ ಸಾಹಿತ್ಯ ಮತ್ತು ಕಲಾವಿದರಿಂದ ಪ್ರತಿಭಟನೆಯೇನಾದರೂ ಬಂದಿದೆಯೇ ?

ಈ) ಹಾಗಿದ್ದಲ್ಲಿ, ಸದರಿ ಪ್ರತಿಮೆಯ ಅನಾವರಣವನ್ನು ಕೈಬಿಡುವಂತೆ ಬೆಂಗಳೂರು ನಗರಸಭೆಗೆ ಸರ್ಕಾರವು ಸೂಚಿಸಲಾಗುವುದೇ ?

ಶ್ರೀ ಎಂ. ಚಂದ್ರಶೇಖರ್ (ನಗರಾಭಿವೃದ್ಧಿ ಸಚಿವರು).—

ಅ) ಪ್ರತಿಮೆಗಳನ್ನು ಅನಾವರಣ ಮಾಡುವುದಕ್ಕೆ ಸಂಬಂಧಿತವಾಗಿ ಯಾರ ಪ್ರತಿಮೆ ಎಂಬುದನ್ನು ತಿಳಿದು, ಅವರ ಸಂಬಂಧಿಕರುಗಳ ಒಪ್ಪಿಗೆ ಪಡೆದು ಅವರ ಭಾವ ಚಿತ್ರಗಳಿಗನುಸಾರವಾಗಿ ಶಿಲ್ಪಿಗಳಿಂದ ರಚಿಸಿ, ಸೂಕ್ತ ಸ್ಥಳವನ್ನು ಗುರುತಿಸಿ, ರಾಜ್ಯ ಅಥವಾ ರಾಷ್ಟ್ರದ ಮಂತ್ರಿಮಂಡಲಗಳ ಅಧ್ಯಕ್ಷತೆಯಲ್ಲಿ ಅನಾವರಣ ಮಾಡುವ ಪದ್ಧತಿ ರೂಢಿಯಲ್ಲಿದೆ.

ಆ) ಕಾಮರಾಜನಾಡರ್ ಪಾಡಾರ್‌ರವರ ಪ್ರತಿಮೆಯ ಅನಾವರಣ ಸಮಿತಿಯು ಉದ್ದೇಶಿಸಿದ ಸ್ಥಳವು ಸೂಕ್ತವಲ್ಲದ ಕಾರಣ ನಗರ ಪಾಲಿಕೆಯು ಅನುಮತಿ ನೀಡಿರುವುದಿಲ್ಲ.

ಇ) ಬೆಂಗಳೂರು ಮಹಾನಗರ ಪಾಲಿಕೆಗೆ ಪ್ರತಿಭಟನೆ ಬಂದಿದೆ.

ಈ) ಪ್ರತಿಭಟನೆಗಳನ್ನು ಪರಿಶೀಲಿಸಿ ಸೂಕ್ತ ಕ್ರಮ ತೆಗೆದುಕೊಳ್ಳಲು ಸೂಚಿಸಲಾಗುವುದು.

ಶ್ರೀ ಬಿ. ಲಕ್ಕಪ್ಪ.—ಮಾನ್ಯ ಅಧ್ಯಕ್ಷರೇ ಬೆಂಗಳೂರಿನಲ್ಲಿ ಚಕ್ರವರ್ತಿ ಶಿವಾಜಿ ಕಾಮರಾಜ್‌ನಾಡರ್ ಮೊದಲಾದವರ ಪ್ರತಿಮೆಗಳನ್ನು ಸ್ಥಾಪನೆ ಮಾಡುವುದಕ್ಕೆ ಮುಂದಾದಾಗ ಇಲ್ಲಿ ಕನ್ನಡ ಕಲಾವಿದರು, ಸಾಹಿತಿಗಳು ಮತ್ತು ಕನ್ನಡಾಭಿಮಾನಿಗಳು ಅದನ್ನು ಪ್ರಬಲವಾಗಿ ವಿರೋಧಿಸಿದ್ದರು ಈ ಬಗ್ಗೆ ಸರ್ಕಾರದ ನಿಲುವು ಏನು ಮತ್ತೆ ನಗರದಲ್ಲಿ ಪ್ರತಿಮೆಗಳನ್ನು ಸ್ಥಾಪಿಸತಕ್ಕಂಥ ಕಾಲದಲ್ಲಿ ನಗರಪಾಲಿಕೆಯವರು ಅನುಸರಿಸತಕ್ಕಂಥ ನಿಯಮಗಳು ಏನು ? ಪ್ರತಿಮೆಗಳನ್ನು ಆಯ್ಕೆಮಾಡುವಾಗ ಕರ್ನಾಟಕದಲ್ಲಿ ಕನ್ನಡ ನಾಡು-ನುಡಿಗೆ ಸೇವೆ ಸಲ್ಲಿಸಿ ಹೆಸರಾದಂಥ ಕಲಾವಿದರು ಕನ್ನಡ ಬರಹಗಾರರು ಸಮಾಜ ಸುಧಾರಕರು ಇದ್ದರೆ ಅವರ ಪ್ರತಿಮೆಗಳನ್ನು ಸ್ಥಾಪನೆ ಮಾಡತಕ್ಕಂಥ ವಿಚಾರದಲ್ಲಿ ನಗರ ಪಾಲಿಕೆಯವರಾಗಲಿ, ಸರ್ಕಾರದವರಾಗಲಿ ವಿಚಾರ ಮಾಡಿರುತ್ತಾರೆಯೇ ಎಂದು ಕೇಳುತ್ತೇನೆ ?

ಶ್ರೀ ಎಂ. ಚಂದ್ರಶೇಖರ್.—ಮಾನ್ಯ ಅಧ್ಯಕ್ಷರೇ ಕಾಮರಾಜನಾಡರ್‌ರವರು ರಾಷ್ಟ್ರೀಯ ಮಹಾನಾಯಕರು, ಸ್ವಾತಂತ್ರ್ಯ ಹೋರಾಟಗಾರರು ಅವರು ಯಾವುದೇ ಒಂದು ಪಕ್ಷಕ್ಕೆ ಒಂದು ಪ್ರದೇಶಕ್ಕೆ ಸೀಮಿತರಾದ ವ್ಯಕ್ತಿಯಲ್ಲ. ಅವರನ್ನು ಸಂಕುಚಿತವಾಗಿ ಕಾಣುವುದು ಸರಿಯಲ್ಲವೆಂದು ನನ್ನ ಭಾವನೆ ಕಾಮರಾಜನಾಡರ್‌ರವರ ಪ್ರತಿಮೆಯ ಅನಾವರಣ ಸಮಿತಿಯವರು ಸೂಚಿಸಿರುವ ಸ್ಥಳವು ಸೂಕ್ತವಲ್ಲದ ಕಾರಣ ನಗರ ಪಾಲಿಕೆಯವರು ಒಪ್ಪಿಕೊಂಡಿಲ್ಲ ಆದಕ್ಕಾಗಿ ಪ್ರತಿಭಟನೆಯ ಸೂಚನೆ ಮಾಡಿದ್ದಾರೆ. ಮತ್ತೆ ಅದನ್ನು ಪರಿಶೀಲನೆ ಮಾಡಿ ಸರಿಯಾದಂಥ ಕಾರ್ಯಕ್ರಮ ತೆಗೆದುಕೊಳ್ಳುತ್ತದೆ.